

ಅಣುಬಾಂಬ್ ಗುಮ್ಮಟದ ಪಕ್ಕದಲ್ಲಿ ಹರಿಯುತ್ತಿರುವ ಹಿರೋಷಿಮಾ ನಗರದ ಜೀವದಾಯಿನಿ ನದಿ ಮೊಟೊಯಸು

# ಹಿರೋಷಿಮಾ

# ಮನುಕುಲದ ಪಾಠಶಾಲೆ



ದುರಂತದ ಕಥೆಯನ್ನು ಉಸುರುವಂತಿರುವ ಕಾಗದದ ಹಕ್ಕಿಗಳು

ಅಣುಬಾಂಬ್ ದಾಳಿಗೆ ತುತ್ತಾದ ಸುಮಾರು 1.6 ಲಕ್ಷ ದುರ್ದೈವಿಗಳನ್ನು ಸ್ಮರಿಸುತ್ತಾ ಪ್ರತಿವರ್ಷ ಆಗಸ್ಟ್ 6ರಂದು, ಹಿರೋಷಿಮಾದಲ್ಲಿ ‘ಶಾಂತಿ ಸಂಸ್ಮರಣಾ ದಿನಾಚರಣೆ’ ಆಚರಿಸಲಾಗುತ್ತದೆ. ಹಿರೋಷಿಮಾದಿಂದ ನಾವು ಪಾಠ ಕಲಿತಿದ್ದೇವೆಯೆ?

■ ಡಿ.ಜಿ. ಮಲ್ಲಿಕಾರ್ಜುನ

ಜಪಾನಿನಲ್ಲಿ ಪರಮಾಣು ಬಾಂಬ್‌ಗಳು ಉಂಟುಮಾಡಿದ ಸಾವು ಮತ್ತು ವಿನಾಶದ ಬಗ್ಗೆ ತಿಳಿದಾಗ ಗಾಂಧೀಜಿ ಆಘಾತಕ್ಕೊಳಗಾಗಿದ್ದರು. ಜಗತ್ತು ಅಹಿಂಸೆಯನ್ನು ಅಳವಡಿಸಿಕೊಳ್ಳದಿದ್ದರೆ ಮನುಕುಲವೇ ಆತ್ಮಹತ್ಯೆಯತ್ತ ಸಾಗುತ್ತದೆ ಎಂದವರು ಹೇಳಿದ್ದರು. ಜಗತ್ತನ್ನು ಪರಮಾಣು ಬಾಂಬ್‌ನಿಂದ ಕಾಪಾಡುವ ಶಕ್ತಿ ಅಹಿಂಸೆಗೆ ಮಾತ್ರವಿದೆ, ಮತ್ತೊಂದು ಬಾಂಬ್‌ನಿಂದ ಅಲ್ಲ ಎನ್ನುವ ಅಭಿಪ್ರಾಯ ಬಾಪುವಿನದಾಗಿತ್ತು.

2023ರ ಮೇ ತಿಂಗಳಿನಲ್ಲಿ ಜಪಾನಿನಲ್ಲಿ ನಡೆದ ‘ಜಿ 7’ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರು ಹಿರೋಷಿಮಾಗೆ ಭೇಟಿ ನೀಡಿದ ಸಂದರ್ಭದಲ್ಲಿ, ಭಾರತ ಮತ್ತು ಜಪಾನ್ ನಡುವಿನ ಸ್ನೇಹ ಮತ್ತು ಸೌಹಾರ್ದತೆಯ ಸಂಕೇತವಾಗಿ ಭಾರತವು ಹಿರೋಷಿಮಾಕ್ಕೆ ಗಾಂಧೀಜಿ ಪ್ರತಿಮೆಯನ್ನು ಉಡುಗೊರೆಯಾಗಿ ನೀಡಿತು.

ಹಿರೋಷಿಮಾ ಮೇಲೆ ಬಾಂಬ್ ಬಿದ್ದಾಗ ಪಳೆಯುಳಿಕೆಯಂತೆ ಉಳಿದುಹೋದ ಕಟ್ಟಡ ‘ಇಂಡಸ್ಟ್ರಿಯಲ್ ಪ್ರಮೋಷನ್ ಹಾಲ್’. ಅದನ್ನು ‘ಅಟಾಮಿಕ್ ಬಾಂಬ್ ಡೋಮ್’ (ಅಣುಬಾಂಬ್ ಗುಮ್ಮಟ) ಎಂದೂ ಕರೆಯುವರು. ಅಸ್ಥಿಪಂಜರದಂತೆ ಕಾಣುವ, ಬಹುಪಾಲು ಶಿಥಿಲವಾಗಿರುವ ಈ ಕಟ್ಟಡ ಬಾಂಬ್ ದಾಳಿಯ ಕಥನವನ್ನು ಮೌನವಾಗಿ ಹೇಳುತ್ತಿದೆ. ಮೊಟೊಯಸು

